ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಮಂತ್ರಿಗಳು).—

ಅ) ನೌಕರರ ಸಂಘ ಒಂದನ್ನು ಕಟ್ಟುವಲ್ಲಿ ಅದನ್ನು ನೋಂದಾಯಿಸಲೇಬೇಕು ಅಥವಾ ಮಾನ್ಯತೆ ಯನ್ನು ಪಡೆದಿರಲೇ ಬೇಕು ಎಂಬ ಯಾವುದೇ ನಿರ್ಬಂಧವಿಲ್ಲವಾದ್ದರಿಂದ ಈ ಬಗ್ಗೆ ನಿಖರವಾಗಿ ಹೇಳಲಾಗುವುದಿಲ್ಲ.

ಆ) ಹೌದು. ಮಾನ್ಯತೆ ಪಡೆದ ಸಂಘ ಒಂದಿದ್ದು ಅದರ ವಿವರ ಈ ಕೆಳಕಂಡಂತಿದೆ. ಕರ್ನಾಟಕ ರಾಜ್ಯ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘ, ಬಸವನಗುಡಿ, ಬೆಂಗಳೂರು.

ಇ) ಯಾವುದೇ ಕ್ರಮವಾದ ಅಗತ್ಯವಿಲ್ಲ.

ಬೀಳಗಿಯಲ್ಲಿ ಅರ್ಧಕ್ಕೆ ಸ್ಥಗಿತಗೊಂಡಿರುವ ಕನ್ನಡ ಗಂಡು ಮಕ್ಕಳ ಮಾದರಿ ಪ್ರಾಥಮಿಕ ಶಾಲ ಕಟ್ಟಡದ ವಿಚಾರ

೧೪೫೫ (೨೯೭೮) ಶ್ರೀ ಬಾಬುರೆಡ್ಡಿ ತುಂಗಳ್ (ಬೀಳಗಿ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ತಾಲ್ಲೂಕು ಕೇಂದ್ರವಾದ ಬೀಳಗಿಯ ಕನ್ನಡ ಗಂಡು ಮಕ್ಕಳ ಮಾದರಿ ಪ್ರಾಥಮಿಕ ಶಾಲೆಯ ಎರಡು ಕೋಣೆಗಳ ನಿರ್ಮಾಣ ಕಾರ್ಯ ಅರ್ಧಕ್ಕೆ ನಿಂತಿದ್ದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಸದರಿ ಕೊಠಡಿಗಳ ನಿರ್ಮಾಣವನ್ನು ಪೂರ್ತಿಗೊಳಿಸುವ ವಿಚಾರವೇನಾದರೂ ಸರ್ಕಾರದವರ ಗಮನದಲ್ಲಿದೆಯೇ ?

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಸಚಿವರು).—

ಅ) ಬಂದಿದೆ.

ಆ) ಬಿಜಾಪುರ ಜಿಲ್ಲೆ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರ ವರದಿಯ ಪ್ರಕಾರ, ಈ ಶಾಲೆಗೆ ಈಗಾಗಲೇ ೪ ಕೊಠಡಿಗಳನ್ನು ಸ್ಥಳೀಯ ವಂತಿಕೆ ಹಣದಿಂದ ಪೂರ್ಣಗೊಳಿಸಿದ್ದು, ಉಳಿದೆರಡು ಕೊಠಡಿಗಳ ನಿರ್ಮಾಣ ಕಾರ್ಯ ಪೂರ್ಣಗೊಳಿಸಲು ಲೋಕೋಪಯೋಗಿ ಇಲಾಖೆಯಿಂದ ಅಂದಾಜು ಸ್ವೀಕರಿಸಿದ ನಂತರ ಕ್ಷೇತ್ರಾಭಿವೃದ್ಧಿ ಅಧಿಕಾರಿ ಹಾಗೂ ಲೋಕೋಪಯೋಗಿ ಇಲಾಖೆಯ ಸಹಕಾರದೊಂದಿಗೆ ಎರಡು ಕೊಠಡಿಗಳ ಕೆಲಸ ಪೂರ್ಣಗೊಳಿಸಲಾಗುವುದು ? ಈ ವಿಷಯ ಜಿಲ್ಲಾ ಪರಿಷತ್ತಿಗೆ ಸಂಬಂಧಿಸಿರುವುದರಿಂದ, ಬಿಜಾಪುರ ಜಿಲ್ಲಾ ಪರಿಷತ್ತಿನ ಮುಖ್ಯ ಕಾರ್ಯದರ್ಶಿಯವರಿಗೆ ಪತ್ರ ಬರೆದು ಸೂಕ್ತ ಕ್ರಮ ಜರುಗಿಸಲು ಕೋರಲಾಗುವುದು.

ಸಾಯಿಲ್ ಕನ್‌ಸರ್‌ವೇಷನ್ ಕೆಲಸಗಳು

೧೪೫೭ (೩೦೩೮) ಶ್ರೀಮತಿ ಸುಮಾವಸಂತ (ವಿರಾಜಪೇಟೆ).—ಮಾನ್ಯ ಕೃಷಿ ಮತ್ತು ಅರಣ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

ಅ) ಸಾಯಿಲ್ ಕನ್‌ಸರ್‌ವೇಷನ್ ಇಲಾಖೆಯವರಿಗೆ ಸರ್ಕಾರದಿಂದ ೧೯೮೫ ರಿಂದ ಜಿಲ್ಲಾವಾರು ಮಂಜೂರಾದ ಹಾಗೂ ಖರ್ಚು ಮಾಡಿದ ಹಣವೆಷ್ಟು ?

ಆ) ಕೊಡಗು ಜಿಲ್ಲೆಗೆ ೧೯೮೫ ರಿಂದ ಮಂಜೂರಾದ ಹಣ ಎಷ್ಟು ? (ತಾಲ್ಲೂಕುವಾರು ಹಾಗೂ ವರ್ಷವಾರು ವಿವರ ನೀಡುವುದು)

ಇ) ವಿರಾಜಪೇಟೆ ತಾಲ್ಲೂಕಿನಲ್ಲಿ ೧೯೮೫ ರಿಂದ ವರ್ಷವಾರು ತೆಗೆದುಕೊಂಡ ಕೆಲಸ ಹಾಗೂ ಅದಕ್ಕೆ ವೆಚ್ಚ ಮಾಡಿದ ಹಣವೆಷ್ಟು ?

ಶ್ರೀ ಬಿ. ರಾಚಯ್ಯ (ಕೃಷಿ ಮತ್ತು ಅರಣ್ಯ ಸಚಿವರು).—

ಅ) ೧೯೮೫-೮೬ ರಿಂದ ೧೯೮೮-೮೯ ರವರೆಗೆ ಭೂಸಾರ ಸಂರಕ್ಷಣೆಗಾಗಿ ಕೃಷಿ ಇಲಾಖೆಗೆ ವರ್ಷಂಪ್ರತಿ ಹಾಗೂ ಜಿಲ್ಲಾವಾರು ಮಂಜೂರಾದ ಹಾಗೂ ಖರ್ಚು ಮಾಡಿದ ಹಣದ ವಿವರವನ್ನು ಲಗತ್ತಿಸಿರುವ ಪಟ್ಟಿಯಲ್ಲಿ ಕೊಡಲಾಗಿದೆ. (ಅನುಬಂಧ-೧)